ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಶ್ರೀ ಮಾಲೀಕಯ್ಯ ಗುತ್ತೇದಾರ್ ರವರು ಹೇಳಿದ ಹಾಗೆ ಆ ವರದಿಯನ್ನು ತಕ್ಷಣ ತರಿಸಿಕೊಂಡು, ಏನು ಆಗಿದೆ ಎಂಬುದನ್ನು ನೋಡುತ್ತೇವೆ ಈಗಾಗಲೇ ಏತ ನೀರಾವರಿ ಯೋಜನೆಗಳಲ್ಲಿ ಬಹಳಷ್ಟು ಕುಂಠಿತವಾಗಿರತಕ್ಕಂಥ ಯೋಜನೆಗಳು ಇವೆ ಅವು ಕೆ.ಪಿ.ಸಿ.ಟಿ. ಎಲ್.ಗೆ ಬಿಲ್ ಕಟ್ಟದೇ ಇರತಕ್ಕ ಮತ್ತು ಮೋಟಾರು ಹಾಳಾಗಿರತಕ್ಕ ಮತ್ತೆ ಕೆಲವು ಅರ್ಧಂಬರ್ಧ ಕಾಮಗಾರಿಗೇ ನಿಲ್ಲಿಸಿರತಕ್ಕ ಯೋಜನೆಗಳು ಇವೆ. ಒಟ್ಟು 44 ಯೋಜನೆಗಳಲ್ಲಿ 28 ಸಂಪೂರ್ಣ ಹಾಳಾಗಿರುತ್ತವೆ. ಕೆಲಸಕಾರ್ಯಗಳು ನಡೆಯತಕ್ಕ ಯೋಜನೆಗಳು 8 ಮತ್ತು ಇನ್ನೆರಡು ಇವೆ. ಹಾಗಾಗಿ ಈ ವರ್ಷ ಎಲ್ಲಾ ಏತನೀರಾವರಿ ಯೋಜನೆಗಳನ್ನು ತ್ವರಿತಗತಿಯಲ್ಲಿ ತೆಗೆದುಕೊಂಡು, ಕೆಲಸ ಕಾರ್ಯಗಳನ್ನು ಮುಗಿಸಲು ನಾವು ಸಂಪೂರ್ಣವಾಗಿ ಪ್ರಯತ್ನವನ್ನು ಮಾಡುತ್ತೇವೆ.

ಬೀದರ್ ನಗರದ ಮಾರ್ಕೆಟ್ ಪೋಲೀಸ್ ಠಾಣೆ ಮುಂದೆ ನಡೆದ ಕೂಲಿ ಪ್ರಕರಣವನ್ನು ಸಿ.ಓ.ಡಿ.ಗೆ ಒಪ್ಪಿಸುವ ಬಗ್ಗೆ

347 (3274) ಶ್ರೀ ಗುಂಡಪ್ಪ ವಕೀಲ್ (ಔರಾದ್): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಿನಾಂಕ : 25- 11- 99ರಂದು ಬೆಳಿಗ್ಗೆ 10- 30ಗಂಟೆಗೆ ವೈಜನಾಥ್ ಪಾಟೀಲ್ ಜೀರ್ಗಾ ಇವರ ಮೇಲೆ ಬೀದರ್ ನಗರದ ಮಾರ್ಕೆಟ್ ಪೊಲೀಸ್ ಠಾಣೆ ಮುಂದೆ 5 ಸುತ್ತಿನ ಗುಂಡು ಹಾರಿಸಿ ಕೂಲೆ ಪ್ರಯತ್ನ ಮಾಡಲಾಗಿ ಮಾರ್ಕೆಟ್ ಪೋಲೀಸ್ ಠಾಣೆಯಲ್ಲಿ 9 ಜನ ಆರೋಪಿಗಳ ವಿರುದ್ಧ ಕಲಂ 307ರ ಪ್ರಕಾರ ಗು.ಸಂ. 175 : 99ರಲ್ಲಿ ಎಫ್ ಐಆರ್ ದಾಖಲಾಗಿದ್ದು ಈ ತನಿಖೆ ಸಿಓಡಿಗೆ ಒಪ್ಪಿಸಲಾಗಿದೆಯೆ;

ಆ) ಆರೋಪಿತರು ಬಹಿರಂಗವಾಗಿ ತಿರುಗಾಡುತ್ತಿದ್ದರುವುದು ಹಾಗೂ ಅಂತಹವರನ್ನು ದಸ್ತಗಿರಿ ಮಾಡಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ದಸ್ತಗಿರಿ ಮಾಡಿದ್ದಲ್ಲಿ ಯಾರು ಯಾರನ್ನು ದಸ್ತಗಿರಿ ಮಾಡಲಾಗಿದೆ; ಈ ಪ್ರಕರಣದ ಯಾವುದಾದರೂ ವಾಹನವನ್ನು ಗುರುತಿಸಲಾಗಿದೆಯೆ? ಹಾಗಿದ್ದಲ್ಲಿ ಆ ವಾಹನವನ್ನು ಜಪ್ತಿ ಮಾಡಲಾಗಿದೆಯೆ;

ಈ) ಈ ಪ್ರಕರಣ ಸಿ.ಓ.ಡಿ.ಗೆ ವಹಿಸಲಾಗಿದೆಯೇ

ಉ) ಹಾಗಿದ್ದಲ್ಲಿ ತನಿಖೆ ಈಗ ಯಾವ ಹಂತದಲ್ಲಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಹೌದು

ಆ) ಪ್ರಥಮ ವರ್ತಮಾನ ವರದಿಯಲ್ಲಿನಮೂದಿಸಿರುವ 9 ಜನ ಆರೋಪಿತರ ಪೈಕಿಇಬ್ಬರು ರಾಜ್ಯ ಉಚ್ಚ ನ್ಯಾಯಾಲಯದಿಂದನಿರೀಕ್ಷಣಾ ಜಾಮೀನು ಪಡೆದಿದ್ದು ಉಳಿದ 7 ಜನ ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ.

ಇ) ಉದ್ಭವಿಸುವುದಿಲ್ಲ.

ಈ) ಹೌದು.

ಉ) ತನಿಖೆ ಪ್ರಗತಿಯಲ್ಲಿದೆ.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಅಧ್ಯಕ್ಷರೇ, ಸರ್ಕಾರದ ಈ ಉತ್ತರ ಸಮರ್ಪಕವಾಗಿಲ್ಲ. ಇದರಲ್ಲಿ ರಮೇಶ್ ಎನ್ನತಕ್ಕ ಒಬ್ಬ ಆರೋಪಿಯನ್ನು ದಸ್ತಗಿರಿ ಮಾಡಿ, ಅವನನ್ನು ಊರಿಗೆ ಕರೆದು ಕೊಂಡು ಹೋಗಿ ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ಮೂರು ದಿವಸ ಅರೆಸ್ಟ್ ಮಾಡಿ ಇಟ್ಟುಕೊಂಡಿದ್ದರೂ ಕೂಡ ಕೋರ್ಟಿಗೆ ಪ್ರೊಡ್ಯೂಸ್ ಮಾಡದೇ ಅವನನ್ನು ರಿಲೀಸ್ ಮಾಡಿದ್ದಾರೆ. ಉಳಿದ ಆರೋಪಿಗಳನ್ನು ಯಾರಿಗೂ ಅರೆಸ್ಟ್ ಮಾಡುತ್ತಾ ಇಲ್ಲ. ಇದರಲ್ಲಿ ಇನ್‌ವಾಲ್ವ್ ಆಗಿರತಕ್ಕ ವೆಹಿಕಲ್ ಸೀಸ್ ಮಾಡುತ್ತಾ ಇಲ್ಲ ಈ ತನಿಖೆ ಯಾವ ಹಂತದಲ್ಲಿದೆ? ಅವರು ಏನು ಮಾಡುತ್ತಾ ಇದ್ದಾರೆ? ಅದರ ಬಗ್ಗೆ ಮಾನ್ಯಸಚಿವರು ಸ್ವಲ್ಪ ವಿವರವಾಗಿ ಈ ಸದನಕ್ಕೆ ತಿಳಿಸಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ಈ ಪ್ರಕರಣವನ್ನು ನಾವು ಸಿ.ಓ.ಡಿ. ಯವರಿಗೆ ವಹಿಸದ್ದೇವೆ; ಅವರು ಇದನ್ನು ತನಿಖೆ ಮಾಡುತ್ತಿದ್ದಾರೆ. ಸಿ.ಓ.ಡಿ. ಯವರು ಯಾವ ಯಾವ ರೀತಿಯಾಗಿ ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆಂಬುದನ್ನು ನಾವು ಈಗಲೇ ಬಹಿರಂಗವಾಗಿ ಹೇಳುವುದಕ್ಕಾಗುವುದಿಲ್ಲ. ಆದರ ಬಗ್ಗೆ, ಅದಷ್ಟು ಬೇಗನೆ ಸಿ.ಓ.ಡಿಯವರು ಚಾರ್ಜ್ ಷೀಟ್ ಹಾಕತಕ್ಕ ವ್ಯವಸ್ಥೆ ಮಾಡುತ್ತಾರೆ. ಸಂಬಂದಪಟ್ಟಂತಹ ಆರೋಪಿಗಳನ್ನು ಹಿಡಿಯತಕ್ಕ ಸರ್ವಪ್ರಯತ್ನವನ್ನು ನಡೆಸುತ್ತಾರೆ.

ಶ್ರೀ ಗುಂಡಪ್ಪ ವಕೀಲ್ : ಆರೋಪಿಗಳು ಹಗಲಿನಲ್ಲಿ ರೋಡ್ ಮೇಲೆ, ಪಟ್ಟಣದ ಮೇಲೆ ಎಲ್ಲಾ ಓಣಿ ಮೇಲೆ ತಿರುಗುತ್ತಿದ್ದಾರೆ. ಪೋಲೀಸಿನವರು, ಮತ್ತು ಗವರ್ನಮೆಂಟ್ ಅವರನ್ನು ಹಿಡಿಯಲಿಕ್ಕೆ ತಯಾರಿಲ್ಲ. ಬೇಕಾದರೆ ತಾವು ಅಪ್ಪಣೆ ಕೊಡಿ, ನಾಳೆಯೇ ಆ ಆರೋಪಿಗಳನ್ನು ತಂದು ನಿಮ್ಮ ಮುಂದೆಯೇ ನಿಲ್ಲಿಸುತ್ತೇವೆ. ಮರ್ಡರ್ ಕೇಸ್‌ಗಳಲ್ಲಿ, ಆಫ್‌ಮರ್ಡರ್ ಕೇಸ್‌ಗಳಲ್ಲಿ ಈ ರೀತಿಯಾದರೆ, ಸರ್ಕಾರದಲ್ಲಿ ಕಾನೂನು ವ್ಯವಸ್ಥೆ ಯಾವ ರೀತಿ ಇದೆ ಮತ್ತು ಜನಸಾಮಾನ್ಯರಿಗೆ ಯಾವ ರೀತಿ ರಕ್ಷಣೆ, ನ್ಯಾಯ ದೊರಕುತ್ತದೆ. ಈ ಪ್ರಶ್ನೆಗೆ ನಮಗೆ ಉತ್ತರ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಹೇಳಿದ್ದೇನೆ. ಇದನ್ನು ಸಿ.ಒ.ಡಿಗೆ ವಹಿಸಿರುವುದರಿಂದ, ಇದು ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿದೆ. ಯಾವ ಯಾವ ಹಂತದಲ್ಲಿ ಏನೇನು ನಡೆದಿದೆ ಎಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಸಿ.ಓ.ಡಿಯವರು ಕ್ರಮವನ್ನು ಜರುಗಿಸು ತ್ತಿದ್ದಾರೆ

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸದಸ್ಯರು ಆರೋಪಿಗಳು ಹಾಡು-ಹಗಲಲ್ಲೇ ಬಹಿರಂಗವಾಗಿ ಓಡಾಡುತ್ತಿದ್ದಾರೆಂಬ ಗಂಭೀರವಾದ ಆಪಾದನೆ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಕೇಸನ್ನು ಸಿ.ಓ.ಡಿಗೆ ವಹಿಸಿದಮೇಲೆ ಅವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಅವರು ಅತ್ಯಂತ ಕಡಿಮೆ ಅವಧಿಯಲ್ಲಿಯೇ ಚಾರ್ಜ್‌ಷೀಟ್ ಹಾಕುವವರಿದ್ದಾರೆ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇಂಪಾರ್ಷಿಯಲ್ ಎನ್‌ಕ್ವೈರಿ ಆಗಬೇಕೆಂದು ಈ ಪ್ರಕರಣವನ್ನು ಸಿ.ಓ.ಡಿಗೆ ಕೊಡಲಾಗಿದೆ. ಅವರು ತನಿಖೆ ನಡೆಸಿದ್ದಾರೆ. ಈ ಪ್ರಶ್ನೆ ಬಂದಾಗ. ನಾನು ಈಗಾಗಲೇ ಚರ್ಚೆ ಮಾಡಿದ್ದೇನೆ. ಆದಷ್ಟು ಬೇಗನೆ ಈ ತನಿಖೆಯನ್ನು ಮುಗಿಸಿ, ಚಾರ್ಜ್‌ಷೀಟ್ ಹಾಕುತ್ತಾರೆ.

ಶ್ರೀ ಗುಂಡಪ್ಪ ವಕೀಲ್ : ಸಾಕ್ಷಿಗಳಿಗೆ ಬೇದರಿಕೆ ಹಾಕುತ್ತಿದ್ದಾರೆ. ಆರೋಪಿಗಳು ಓಪನ್ ಆಗಿ ತಿರುಗಾಡುತ್ತಿದ್ದಾರೆ. ಕಂಪ್ಲೇಟ್ ಕೊಟ್ಟವರಿಗೆ ಜೀವ ಬೆದರಿಕೆ ಹಾಕುತ್ತಿದ್ದಾರೆ. 5 ಸಲ ಗುಂಡು ಹಾರಿಸಿದ್ದಾರೆ. ಒಂದು ಗುಂಡು ಹಾರಿಸಲಾಗಿದೆ, ಅವರು ಸಾವಿನ ದವಡೆಯಿಂದ ಹೊರಗೆಬಂದಿದ್ದಾರೆ. ಇದನ್ನೆಲ್ಲಾ ಸವಿಸ್ತಾರವಾಗಿ ಮಾನ್ಯ ಗೃಹಮಂತ್ರಿಗಳು ಹೇಳಬೇಕು. ಸಿ.ಓ. ಡಿಗೆ ವಹಿಸಿದರೆ ಏನಾಗುವುದಿಲ್ಲ, ಅವರು ಏನು ಮಾಡುತ್ತಿದ್ದಾರೆ ಎಂಬುದನ್ನು ಹೇಳಬೇಕು.

ಅಧ್ಯಕ್ಷರು : ಮಾನ್ಯಮಂತ್ರಿಗಳು, ಕೆಲವು ವಿಷಯಗಳನ್ನೆಲ್ಲಾ ಹೇಳುವುದಕ್ಕಾಗುವುದಿಲ್ಲ ವೆಂದು ಹೇಳುತ್ತಿದ್ದಾರೆ. ಮತ್ತೆ ನೀವೇಕೆ ವಿವರಗಳನ್ನು ಕೇಳುತ್ತಿದ್ದೀರಿ.

ಶ್ರೀ ಗುಂಡಪ್ಪ ವಕೀಲ್ : ಸಿ.ಓ. ಡಿಗೆ ವಹಿಸಿದಮೇಲೆ, ಅವರು ಏನು ಮಾಡುತ್ತಿದ್ದಾರೆ ಎಂಬುದು ಮಾನ್ಯ ಗೃಹಮಂತ್ರಿಗಳಿಗೆ ಗೊತ್ತಿರುತ್ತದೆ. ಆರೋಪಿಗಳ ಬಗ್ಗೆ, ಪ್ರೊಟೆಕ್ಷನ್ ಬಗ್ಗೆ ಅವರು ಏನು ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪೋಲೀಸಿನವರು ಇನ್‌ವೆಸ್ಟಿಗೇಷನ್ **ಮಾಡಿದರೆ** ಇದು ಇಂಪಾರ್ಷಿಯಲ್ ಅಲ್ಲ ವೆಂದು ಹೇಳುತ್ತಾರೆ. ಇಂಪಾರ್ಷಿಯಲ್ ಎನ್‌ಕ್ವೈರಿ ಆಗಲಿ ಎಂದು ನಾವು ಸಿ.ಓ. ಡಿಗೆ ವಹಿಸಿಕೊಟ್ಟರೆ ಅವರು ಏನು ಮಾಡುತ್ತಾರೆಂದು ಕೇಳಿದರೆ ಹೇಗೆ? ಅವರು ಇನ್‌ವೆಸ್ಟೀಗೇಷನ್ ಮಾಡುತ್ತಾ ಇದ್ದಾರೆ, ಆದಷ್ಟು ಬೇಗನೆ ಚಾರ್ಜ್‌ಷೀಟ್ ಹಾಕಿಸುತ್ತೇನೆಂದು ಹೇಳುತ್ತಿದ್ದೇನೆ. ಮತ್ತೆ ಮತ್ತೆ ಅದನ್ನೇ ಕೇಳುತ್ತಿದ್ದಾರೆ.

ಸೋಮವಾರಪೇಟೆ ತಾಲ್ಲೂಕಿನ ಹೇಮಾವತಿ ಹಿನ್ನೀರಿನಿಂದ ಮುಳುಗಡೆಯಾದ ಸ್ವಂತ ಆಸ್ತಿ ಕುರಿತು

348 (3197) ಶ್ರೀಎಂ. ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ): ಮಾನ್ಯ ಬೃಹತ್ ಹಾಗೂ ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಹೇಮಾವತಿ ಹಿನ್ನೀರಿನಿಂದ ಮುಳುಗಡೆಯಾದ ಸ್ವಂತ ಆಸ್ತಿ ಎಷ್ಟು ?

ಆ) ಯಾರು ಯಾರಿಗೆ ಪರಿಹಾರ ಕೊಡಲಾಗಿದೆ?

ಇ) ಎಷ್ಟು ಪರಿಹಾರ ಬಾಕಿ ಇದೆ?

ಈ) ಯಾವಾಗ ಪೂರ್ಣ ಕೊಡಲಾಗುವುದು?

ಉ) ಮುಳುಗಡೆಯಾಗಿರುವುದಕ್ಕೆ ದಾಖಲೆ ಒದಗಿಸಲಾಗಿದೆಯೇ?

ಊ) ಬದಲಿ ಜಾಗದ ವ್ಯವಸ್ಥೆ ಮಾಡಲಾಗಿದೆ?

ಋ) ಎಲ್ಲಿ ಬದಲಿ ಜಾಗದ ವ್ಯವಸ್ಥೆ ಮಾಡಲಾಗಿದೆ?